UASB LIBRARY
Newspaper Clippings
Pg .1 Friday 26-03-2021 Jai Kisan



ಕಾರ್ಖಾನೆಗಳ ಕಬ್ಬು ನುರಿಕೆ ಸಾಮರ್ಥ್ಯ ದುಪ್ಪಟ್ಟು | 7 ಲಕ್ಷ ಟನ್ ಹೆಚ್ಚುವರಿ ಉತ್ಪಾದನೆ

ಸಕ್ಕರೆ ಉತ್ಪಾದನೆಯಲ್ಲಿ ಬಂಪರ್

■ ಗಜಾನನ ಹೆಗಡೆ ಬೆಳಗಾವಿ
gajanan.hegde@timesgroup.com

ಈ ಬಾರಿ ರಾಜ್ಯದಲ್ಲಿ ಭರ್ಜರಿ ಕಬ್ಬಿನ ಬೆಳೆಯ ಪರಿಣಾಮ ಹಿಂದಿನ ವರ್ಷಕ್ಕಿಂತ 7 ಲಕ್ಷ ಟನ್ ಹೆಚ್ಚುವರಿ ಸಕ್ಕರೆ ಉತ್ಪಾದನೆಯಾಗಿದೆ. ಜತೆಗೆ ಬಹುತೇಕ ಸಕ್ಕರೆ ಕಾರ್ಖಾನೆಗಳ ಕಬ್ಬು ನುರಿಕೆ ಸಾಮರ್ಥ್ಯ ದ್ವಿಗುಣವಾದ ಪರಿಣಾಮ ಸಕ್ಕರೆ ಹಂಗಾಮು ತ್ವರಿತವಾಗಿ ಮುಕ್ತಾಯಗೊಂಡಿದೆ.

ರಾಜ್ಯದ 66 ಸಕ್ಕರೆ ಕಾರ್ಖಾನೆಗಳು ಮಾ.16ರ ವರೆಗೆ 41.83 ಲಕ್ಷ ಟನ್ ಸಕ್ಕರೆ ಉತ್ಪಾದಿಸಿವೆ. ಸದ್ಯ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ಒನ್ನಾರಿ ಅಮ್ಮನ್ ಸಕ್ಕರೆ ಕಾರ್ಖಾನೆ ಮಾತ್ರ ಕಬ್ಬು ನುರಿಯುತ್ತಿದ್ದು, ಏಪ್ರಿಲ್ ಮೊದಲ ವಾರದವರೆಗೆ ಸಕ್ಕರೆ ಉತ್ಪಾದಿಸುವ ನಿರೀಕ್ಷೆಯಿದೆ. 64 ಸಕ್ಕರೆ ಕಾರ್ಖಾನೆಗಳು ಕಬ್ಬು ನುರಿಕೆ ಕಾರ್ಯವನ್ನು ಈಗಾಗಲೇ ಮುಗಿಸಿವೆ. ಇಂಡಿಯನ್ ಶುಗರ್ ಮಿಲ್ಸ್ ಅಂದಾಜಿನ ಪ್ರಕಾರ ಪ್ರಸಕ್ತ ಹಂಗಾಮಿನಲ್ಲಿ ರಾಜ್ಯದಲ್ಲಿ ಒಟ್ಟು 42.5 ಲಕ್ಷ ಟನ್ ಸಕ್ಕರೆ ಉತ್ಪಾದನೆಯಾಗಲಿದೆ.

ಕಳೆದ ಸಕ್ಕರೆ ಹಂಗಾಮಿನಲ್ಲಿ ನೆರೆ, ಅತಿವೃಷ್ಟಿ ಕಾರಣದಿಂದ ಕಬ್ಬಿನ ಬೆಳೆ ಹಾಳಾಗಿ 35 ಲಕ್ಷ ಲಕ್ಷ ಟನ್ ಸಕ್ಕರೆ ಉತ್ಪಾದನೆಯಾಗಿತ್ತು. ಆದರೆ, ಈ ಬಾರಿ ಉತ್ತಮ ಮಳೆಯಿಂದ ಉತ್ತಮ ಕಬ್ಬಿನ ಬೆಳೆ ಬಂದಿದ್ದರಿಂದ ಸಕ್ಕರೆ ಉತ್ಪಾದನೆಯೂ ಹೆಚ್ಚಿದೆ. ಮಾ.16ರ ವರೆಗೆ ಒಟ್ಟು 43.71 ಲಕ್ಷ ಟನ್ ಕಬ್ಬು ನುರಿದು 41.83 ಲಕ್ಷ ಟನ್ ಸಕ್ಕರೆ ಉತ್ಪಾದಿಸಲಾಗಿದೆ. ಹಿಂದಿನ ವರ್ಷ ಈ ಅವಧಿಗೆ ರಾಜ್ಯದಲ್ಲಿ 33.35 ಲಕ್ಷ ಟನ್ ಸಕ್ಕರೆ ಉತ್ಪಾದನೆಯಾಗಿತ್ತು.



ರಾಜ್ಯದ ಸಕ್ಕರೆ ಉತ್ಪಾದನೆ
(ಲಕ್ಷ ಟನ್ ಗಳಲ್ಲಿ)

ವರ್ಷ	ಕಬ್ಬು ನುರಿಕೆ	ಸಕ್ಕರೆ ಉತ್ಪಾದನೆ
2015-16	376	41
2016-17	192	21
2017-18	347	36
2018-19	409	44
2019-20	353	35

ರಾಜ್ಯದ ಸಕ್ಕರೆ ಕಾರ್ಖಾನೆಗಳು 90ರಿಂದ 140 ದಿನಗಳವರೆಗೆ ಕಬ್ಬು ನುರಿಸುತ್ತಿದ್ದವು. ಆದರೆ, ಈ ಬಾರಿ 90 ರಿಂದ 110 ದಿನಗಳಿಗೇ ಮುಕ್ತಾಯಗೊಂಡಿದೆ. ಬಹುತೇಕ ಸಕ್ಕರೆ ಕಾರ್ಖಾನೆಗಳ ಕಬ್ಬು ನುರಿಕೆ ಸಾಮರ್ಥ್ಯ ದ್ವಿಗುಣವಾಗಿದೆ. ಹೀಗಾಗಿ ಕಬ್ಬಿನ ಬೆಳೆ ಉತ್ತಮವಾಗಿದ್ದರೂ ನುರಿಕೆ ಕಾರ್ಯ ತ್ವರಿತವಾಗಿ ಪೂರ್ಣಗೊಂಡಿದೆ.

- ಆರ್.ಬಿ.ಖಾಂಡಗಾವೆ ನಿರ್ದೇಶಕರು, ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆ

ಗರಿಷ್ಠ ಪ್ರಮಾಣದ ಕಾರ್ಖಾನೆ: ಸಕ್ಕರೆ ಉತ್ಪಾದನೆಯಲ್ಲಿ 3ನೇ ಸ್ಥಾನದಲ್ಲಿರುವ ಕರ್ನಾಟಕದಲ್ಲಿ 5.20 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಕಬ್ಬು ಬೆಳೆಯಲಾಗುತ್ತಿದೆ. ಈ ಪೈಕಿ ಬೆಳಗಾವಿ ಜಿಲ್ಲೆಯೊಂದರಲ್ಲೇ 1.20 ಲಕ್ಷ ಹೆಕ್ಟೇರ್ ಕ್ಷೇತ್ರವಿದೆ. 2009-10ರಲ್ಲಿ ರಾಜ್ಯದಲ್ಲಿ 54 ಸಕ್ಕರೆ ಕಾರ್ಖಾನೆಗಳಿದ್ದವು. 2013-14ರಲ್ಲಿ ಪರವಾನಗಿ ಪಡೆದ ಕಾರ್ಖಾನೆಗಳ ಸಂಖ್ಯೆ 60ಕ್ಕೆ, 2019-20ರಲ್ಲಿ 71ಕ್ಕೆ ಹಾಗೂ ಈ ವರ್ಷ 76ಕ್ಕೆ ಏರಿದೆ. ಆದರೆ, ನಾನಾ ಕಾರಣಗಳಿಂದ ಕೆಲವು ಕಾರ್ಖಾನೆಗಳು ಕಬ್ಬು ನುರಿಕೆ ಮಾಡುತ್ತಿಲ್ಲ. ಹಿಂದಿನ ವರ್ಷ 62 ಕಾರ್ಖಾನೆಗಳು ಮಾತ್ರ ಕಬ್ಬು ನುರಿಸಿವೆ. ಈ ಬಾರಿ ಗರಿಷ್ಠ ಅಂದರೆ 66 ಕಾರ್ಖಾನೆಗಳು ಕಬ್ಬು ನುರಿಸಿವೆ. ಒಟ್ಟಾರೆ ಎಲ್ಲ ಸಕ್ಕರೆ ಕಾರ್ಖಾನೆಗಳ ಕಬ್ಬು ನುರಿಕೆ ಸಾಮರ್ಥ್ಯ ಸುಮಾರು 4 ಲಕ್ಷ ಟನ್.

ಬೆಳಗಾವಿಯೇ ಪ್ರಥಮ

ಸಕ್ಕರೆ ಕಾರ್ಖಾನೆಗಳ ಸಂಖ್ಯೆ, ಸಕ್ಕರೆ ಉತ್ಪಾದನೆ ಮತ್ತು ಸಕ್ಕರೆ ಇಳುವರಿಯಲ್ಲಿ ಬೆಳಗಾವಿ ಜಿಲ್ಲೆ ಪ್ರಥಮ ಸ್ಥಾನದಲ್ಲಿದೆ. ಬೆಳಗಾವಿ ಜಿಲ್ಲೆಯಲ್ಲಿ ಪ್ರಸಕ್ತ ಹಂಗಾಮಿನಲ್ಲಿ 26 ಕಾರ್ಖಾನೆಗಳು ಕಬ್ಬು ನುರಿಸಿ 19.05 ಲಕ್ಷ ಟನ್ ಸಕ್ಕರೆ ಉತ್ಪಾದಿಸಿವೆ. ಜಿಲ್ಲೆಯ ಸಕ್ಕರೆ ಇಳುವರಿ ಶೇ.11.69ರಷ್ಟಿದೆ. ಬಾಗಲಕೋಟೆ ಜಿಲ್ಲೆಯಲ್ಲಿ 11 ಹಾಗೂ ವಿಜಯಪುರ ಜಿಲ್ಲೆಯಲ್ಲಿ 8 ಸಕ್ಕರೆ ಕಾರ್ಖಾನೆಗಳಿದ್ದು, ಸಕ್ಕರೆ ಇಳುವರಿ ಕ್ರಮವಾಗಿ 11.13 ಹಾಗೂ 10.43ರಷ್ಟಿದೆ.

26-03-2021
Vk Pg 07

ವಿಮೆ ನಂಬಿ ಬೇಸತ್ತ ರೈತರು | ಹದಿನಾಲ್ಕು ಸಾವಿರ ರೈತರ ₹17 ಕೋಟಿ ಬಾಕಿ

ರೈತರಿಗೆ ಇನ್ನೂ ಸಿಕ್ಕಿಲ್ಲ ಬೆಳೆ ವಿಮೆ ಪರಿಹಾರ!

◆ ತಿಪ್ಪನಗೌಡ ಬಿಕನಹಳ್ಳಿ

ಕೊಪ್ಪಳ: ಪ್ರಧಾನಮಂತ್ರಿ ಬಿಮಾ ಫಸಲ್ ಯೋಜನೆಯ 2016-17 ಹಾಗೂ 2018-19ನೇ ಸಾಲಿನ ಬೆಳೆ ವಿಮೆ ಪರಿಹಾರ ಹಣ ಕೈಗೆ ಸಿಗದೆ ರೈತರು ಕಂಗಾಲಾಗಿದ್ದಾರೆ. ವಿಮೆ ಪರಿಹಾರ ಹಣಕ್ಕಾಗಿ ನಿತ್ಯ ಕಚೇರಿಗಳಿಗೆ ಅಲೆದಾಡುವಂತಾಗಿದೆ.

ಹೌದು! ಸತತ ಬರ ಮತ್ತು ಬೆಳೆ ಹಾನಿಯಿಂದಾಗಿ ಸಂಕಷ್ಟಕ್ಕೊಳಗಾದ ಅನ್ನದಾತ ವಿಮೆಯಿಂದ ಅಲ್ಪಸ್ವಲ್ಪ ಹಣ ಬಂದಿತೆಂಬ ಆಶಾಭಾವದಿಂದ ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯಲ್ಲಿವಿಮೆ ಕಂತು ಪಾವತಿಸಿ ನೋಂದಣಿ ಮಾಡಿಸಿದ್ದ. ಆದರೆ, ಈ ವರೆಗೂ ಹಣ ಬಾರದಿರುವುದರಿಂದ ಸಾಲ ಪಡೆದು ನೋಂದಣಿ ಮಾಡಿಸಿದ್ದ ರೈತರು ಸಂಕಷ್ಟ ಪಡುವಂತಾಗಿದೆ.

ಕೇಂದ್ರ ಹಾಗೂ ರಾಜ್ಯ ಸರಕಾರ ಜಾರಿಗೆ ತಂದ ಫಸಲ್ ಬಿಮಾ ಯೋಜನೆಯಲ್ಲಿ ಬೆಳೆ ವಿಮೆ ಮೊತ್ತವನ್ನು ರೈತರು ಶೇ.2ರಷ್ಟು ತುಂಬಿದರೆ ಕೇಂದ್ರ ಮತ್ತು ರಾಜ್ಯ ಸರಕಾರ ಅರ್ಧದಷ್ಟು ಹಾಗೂ ವಿಮಾ ಕಂಪನಿ ಅರ್ಧದಷ್ಟು ತುಂಬಿ ರೈತರಿಗೆ ವಿಮೆ ಮೊತ್ತ ನೀಡಬೇಕು. ಆದರೆ, ವಿಮಾ ಕಂಪನಿ ರೈತರು ತುಂಬಿದ ವಿಮೆ ಮೊತ್ತಕ್ಕೆ ಇಲ್ಲಿವರೆಗೂ ಪರಿಹಾರ ನೀಡದೆ ಸತಾಯಿಸುತ್ತಿದೆ. ಕೇಂದ್ರ ಹಾಗೂ ರಾಜ್ಯ ಸರಕಾರ ತಮ್ಮ ಪಾಲಿನ ವಿಮೆ ಮೊತ್ತವನ್ನು ನೀಡಿವೆ.

17 ಕೋಟಿ ರೂ. ವಿಮೆ ಬಾಕಿ : ಆರಂಭದಲ್ಲಿ ರೈತರು ಬೆಳೆ ವಿಮೆ ಕುರಿತು ಸರಿಯಾದ ಮಾಹಿತಿ ಇಲ್ಲದೆ ವಿಮೆ ತುಂಬಲು ಹಿಂದೇಟು ಹಾಕುತ್ತಿದ್ದರು. ಆದರೆ, ಈಗ ಜಾಗೃತಗೊಂಡ ರೈತರು ಪ್ರತಿ ವರ್ಷ ವಿಮೆ ತುಂಬುತ್ತಿದ್ದಾರೆ.



2016-17ನೇ ಸಾಲಿನ ಮುಂಗಾರಿನಲ್ಲಿ 40,139 ರೈತರು ಬೆಳೆ ವಿಮೆ ಕಂತನ್ನು ಪಾವತಿಸಿದ್ದರು. ಆದರೆ 37,424 ರೈತರಿಗೆ 57ಕೋ.ರೂ. ಪರಿಹಾರ ಜಮಾ ಆಗಿದ್ದು ಸರಿಯಾದ ಬೆಳೆ ಸಮೀಕ್ಷೆ ನಡೆದಿಲ್ಲ ಎಂಬ ಕಾರಣಕ್ಕೆ 2,715 ರೈತರಿಗೆ 2.71 ಕೋಟಿ ರೂ.ಪರಿಹಾರ ಬಾಕಿ ಉಳಿಸಲಾಗಿದೆ.

2016-17ನೇ ಸಾಲಿನ ಹಿಂಗಾರಿನಲ್ಲಿ 71,929 ರೈತರು ಬೆಳೆ ವಿಮೆಯ ಕಂತು ಪಾವತಿಸಿದ್ದರು. ಆದರಲ್ಲಿ 62,300 ರೈತರಿಗೆ 63.5 ಕೋಟಿ ಜಮೆಯಾಗಿದೆ. 9,629 ರೈತರಿಗೆ 9.28 ಕೋಟಿ ಪರಿಹಾರ ಬಾಕಿಯಿರಿಸಲಾಗಿದೆ.

2018-19ನೇ ಸಾಲಿನ ಮುಂಗಾರಿನಲ್ಲಿ 1,411 ಜನ ರೈತರಿಗೆ 4.5 ಕೋಟಿ ಪರಿಹಾರ ಬಾಕಿ ಇದೆ. ಹಿಂಗಾರಿನಲ್ಲೂ ಕೂಡ ಸಮೀಕ್ಷೆಯಲ್ಲಿ ಸರಿಯಾದ ಬೆಳೆ ತುಂಬಿಲ್ಲ ಎಂಬ ಕಾರಣದಿಂದ 516 ರೈತರ 1.17 ಕೋಟಿ ಸೇರಿ ಒಟ್ಟು 17.66 ಕೋಟಿ ರೂ. ಬೆಳೆ ಪರಿಹಾರವನ್ನು ವಿಮಾ ಕಂಪನಿಗಳು ಪಾವತಿಸಿಲ್ಲ.

"ಬೆಳೆ ಕೈಕೊಟ್ಟಾಗ ಪರಿಹಾರ ಬರುತ್ತದೆ ಎಂಬ ನಿರೀಕ್ಷೆಯಲ್ಲಿ ಹಲವಾರು ಸಮಸ್ಯೆ ಮಧ್ಯೆಯೂ ರೈತರು ಬೆಳೆ ವಿಮೆ ಕಂತು ತುಂಬಿದ್ದಾರೆ. ಆದರೆ, ಈಗ ಕೆಲವರಿಗೆ ಪರಿಹಾರ ನೀಡಿ ಇನ್ನೂ ಕೆಲವರಿಗೆ ಪರಿಹಾರ ನೀಡದೆ ಸತಾಯಿಸುತ್ತಿದ್ದಾರೆ. ವಿಮೆ ಹಣಕ್ಕಾಗಿ ರೈತರು ನಿತ್ಯ ಬ್ಯಾಂಕ್ ಹಾಗೂ ಜಿಲ್ಲಾಡಳಿತಕ್ಕೆ ಅಲೆದಾಡುತ್ತಿದ್ದಾರೆ.
■ ಬಸವರಾಜಕರಮುಡಿ, ರೈತ

"ತಾಂತ್ರಿಕ ದೋಷದಿಂದ 2016-17 ಹಾಗೂ 2018-19ನೇ ಸಾಲಿನ ಕೆಲವು ರೈತರ ಬೆಳೆವಿಮೆ ಪರಿಹಾರ ಬಾಕಿ ಉಳಿದುಕೊಂಡಿದೆ. ಅದನ್ನು ಸರಿಪಡಿಸಿದ ಬಳಿಕ ತೀಕ್ಷ್ರದಲ್ಲಿಯೇ ಪರಿಹಾರ ಬರಲಿದೆ.
■ ಶಿವಕುಮಾರ,
ಕೃಷಿ ಇಲಾಖೆ ಜಂಟಿ ನಿರ್ದೇಶಕರು, ಕೊಪ್ಪಳ.

26-03-2021
Hd Pg 04

"The past is in your head. The future is in your hand"

UASB
LIBRARY
Newspaper Clippings



Pg .2 Friday 26-03-2021 Jai Kisan

ಮಂಡ್ಯ ಬೆಲ್ಲದ ಕೀರ್ತಿಗೆ ಭಂಗ

ಒಂದು ಕಾಲಕ್ಕೆ ಸಾಗರದಾಚೆಯೂ ಫೇಮಸ್ ಆಗಿತ್ತು

ಪಂಚನದಿಗಳು ಹರಿಯುವ ಮಂಡ್ಯ ಜಿಲ್ಲೆಯಲ್ಲಿ ಅತಿ ಹೆಚ್ಚು ಪ್ರದೇಶ ಅಂದರೆ – 42000 ಹೆಕ್ಟೇರ್‌ನಲ್ಲಿ ಕಬ್ಬು ಬೆಳೆಯಲಾಗುತ್ತದೆ. ಕನ್ನಂಬಾಡಿಕಟ್ಟೆ ನಿರ್ಮಾಣದ (ಕೆಆರ್‌ಎಸ್) ಬಳಿಕ ಜಿಲ್ಲೆಯಲ್ಲಿ ಕಬ್ಬು ಬೆಳೆಯಲಾಗುತ್ತಿದ್ದು, ಆಲೆಮನೆ ಉದ್ಯಮವೂ ಚಿಗುರೊಡೆಯಿತು. ಇದರಿಂದ 1980ರ ದಶಕದಲ್ಲೇ ಮಂಡ್ಯಕ್ಕೆ 'ಸಕ್ಕರೆ ನಾಡು ಬೆಲ್ಲದ ಬೀಡು' ಹೆಸರು ಬಂದಿತು. ಇಂಥ ಖ್ಯಾತಿವೆತ್ತ ಬೆಲ್ಲದ ಬೀಡು ಇತ್ತೀಚಿನ ದಿನಗಳಲ್ಲಿ ಸಲ್ಲದ ಕಾರಣಕ್ಕೆ ಸುದ್ದಿಯಾಗುತ್ತಿದೆ. ಏನಿದರ ಹಕೀಕತ್ತು?

ವಿಕ INFO

ಬೆಲ್ಲದ ಮಾದರಿಗಳು

- ಕುರಿಕಾಲಚ್ಚು ಬೆಲ್ಲ
- ಆಕಬೆಲ್ಲ(ಗೋಪುರದಚ್ಚು)
- ಅಚ್ಚುಬೆಲ್ಲ, ಗರಿಅಚ್ಚು
- ಈಚಲುಗರಿ ಚಾಪೆಬೆಲ್ಲ
- ಬಕೆಟ್ ಬೆಲ್ಲ(20 ಕಿಲೋ, 10 ಮತ್ತು 5 ಕಿಲೋ ತೂಕದ್ದು)
- ಉಂಡೆ ಬೆಲ್ಲ, ಟಿನ್ ಬೆಲ್ಲ, ಗೋಲಿಬೆಲ್ಲ
- ಪೌಡರ್ ಬೆಲ್ಲ(ಪುಡಿಬೆಲ್ಲ), ದ್ರವಬೆಲ್ಲ (ಕಾಕಂಬಿ)
- 1 ಕಿಲೋ, 500ಗ್ರಾಂ, 250ಗ್ರಾಂ ಹಾಗೂ 50 ಗ್ರಾಂ ತೂಕದ್ದು



ಹೊರ ರಾಜ್ಯಗಳಲ್ಲಿ ಬೇಡಿಕೆ

ಮಂಡ್ಯದ ಎಪಿಎಂಸಿಯೇ ಪ್ರಮುಖ ಬೆಲ್ಲದ ಮಾರುಕಟ್ಟೆ. ನಿತ್ಯ 150ಕ್ಕೂ ಹೆಚ್ಚು ಲಾರಿ ಲೋಡ್‌ನಷ್ಟು ಬೆಲ್ಲ ನೆರೆ ಜಿಲ್ಲೆ, ರಾಜ್ಯಗಳಿಗೆ ಪೂರೈಕೆಯಾಗುತ್ತಿತ್ತು.

ಎಲ್ಲೆಲ್ಲಿಗೆ ರವಾನೆ?

ಮಹಾರಾಷ್ಟ್ರ, ಗುಜರಾತ್, ಛತ್ತೀಸ್‌ಗಢ, ರಾಜಸ್ಥಾನ, ಉತ್ತರಪ್ರದೇಶ, ದಿಲ್ಲಿ, ಕೇರಳ, ತಮಿಳುನಾಡು, ಆಂಧ್ರಪ್ರದೇಶ, ಕೋಲ್ಕತ್ತಾ, ಲಕ್ಷದ್ವೀಪ ಇತ್ಯಾದಿ ರಾಜ್ಯಗಳು.

ಆಲೆಮನೆಗಳು

1980-90ರ ದಶಕದಲ್ಲಿ ಜಿಲ್ಲೆಯಲ್ಲಿ 5500ಕ್ಕೂ ಆಲೆಮನೆಗಳಿದ್ದವು. ಆದರೀಗ 1000 ಗಾಣಗಳಿದ್ದು ಸದ್ಯಕ್ಕೆ 150 ಮಾತ್ರ ಸಕ್ರಿಯವಾಗಿವೆ.

ಒಂದು ಜಿಲ್ಲೆ-ಒಂದು ಉತ್ಪನ್ನ

ಆತ್ಮನಿರ್ಭರ ಭಾರತ ಅಭಿಯಾನದಡಿ 'ಒಂದು ಜಿಲ್ಲೆ-ಒಂದು ಉತ್ಪನ್ನ'ಕ್ಕೆ ಮಂಡ್ಯ ಬೆಲ್ಲದ ಉತ್ಪನ್ನವನ್ನು ಕೇಂದ್ರ ಸರಕಾರ ಆಯ್ಕೆ ಮಾಡಿದೆ. ಇದು ಗತವೈಭವ ಮರುಕಳಿಸಲು ಸಹಕಾರಿಯಾಗಿದೆ.

ಮಂಡ್ಯ ಬೆಲ್ಲಕ್ಕೆ ಏಕೆ ಬೇಡಿಕೆ?

ಬೆಲ್ಲದ ಸಿಹಿ ತಿನಿಸುಗಳಿಗೆ ಬಹುತೇಕ ಮಂಡ್ಯ ಬೆಲ್ಲವನ್ನೇ ಬಳಸಲಾಗುತ್ತದೆ. ಇಲ್ಲಿನ ಬೆಲ್ಲ ಅತಿ ಹೆಚ್ಚು ಸಿಹಿ ಅಂಶದಿಂದ ಕೂಡಿರುತ್ತಿತ್ತು.

ಕೆಟ್ಟ ಹೆಸರು ತಂದ ರಾಸಾಯನಿಕ ಬೆಲ್ಲ

ದಶಕದ ಹಿಂದೆ ಜನರು ಬಿಳಿ ಬೆಲ್ಲಕ್ಕೆ ಮಾರುಹೋದ ಪರಿಣಾಮ ವರ್ತಕರು/ದಲ್ಲಾಳಿಗಳ ಬೇಡಿಕೆಯಂತೆ ಜಿಲ್ಲೆಯ ರೈತರು ಕೂಡ ರಾಸಾಯನಿಕ ಮಿಶ್ರಿತ ಬೆಲ್ಲ ತಯಾರಿಕೆ ಆರಂಭಿಸಿದರು. ಉತ್ತರ ಪ್ರದೇಶ, ಮಹಾರಾಷ್ಟ್ರದಿಂದ ವಲಸೆ ಬಂದ ಕಾರ್ಮಿಕರು, ಉದ್ಯಮಿಗಳು ಆಲೆಮನೆಗಳನ್ನು ಬಾಡಿಗೆಗೆ ಪಡೆದು ಬಿಳಿಬೆಲ್ಲ ತಯಾರಿಸಲಾರಂಭಿಸಿದಾಗ ಮಂಡ್ಯ ರೈತರು ಅನುಸರಿಸಿದರು. ಇದಕ್ಕೆ ಆರಂಭದಲ್ಲಿ ಬೇಡಿಕೆ ಇತ್ತಾದರೂ ಕ್ರಮೇಣ ತಿರಸ್ಕಾರಕ್ಕೆ ಒಳಗಾಯಿತು. ಹೆಚ್ಚು ದಿನ ಇಡಲಾಗುತ್ತಿರಲಿಲ್ಲ, ದಿನ ಕಳೆದಂತೆ ಬಣ್ಣ ಬದಲಾಗುತ್ತಿತ್ತು. ಇದರಿಂದ ಇತ್ತೀಚಿನ ವರ್ಷಗಳಲ್ಲಿ ಮಂಡ್ಯ ಬೆಲ್ಲಕ್ಕೆ ಬೇಡಿಕೆ ಇಲ್ಲದಂತಾಗಿತ್ತು. ಕೆಲ ವರ್ಷಗಳ ಹಿಂದೆ ವರ್ತಕರೊಬ್ಬರಿಗೆ ಹೊಸದಿಲ್ಲಿಯ ಆಹಾರ ಸುರಕ್ಷತಾ ಮತ್ತು ಗುಣಮಟ್ಟ ಪ್ರಾಧಿಕಾರದಿಂದ ಸಮನ್ಸ್ ಕೂಡ ಬಂದಿತ್ತು. ಹೀಗಾಗಿ ಮಂಡ್ಯ ಬೆಲ್ಲಕ್ಕೆ ಬೆಲೆಯೂ ಕಡಿಮೆಯಾಗಿ, ಬೇಡಿಕೆಯೂ ಕುಸಿದಿದೆ.

For more information visit
University Library Website
Web - uasbagrilibindia.org
E-mail- librarian@uasbangalore.edu.in

26-03-2021
Vk Pg 07

26-03-2021
Uv Pg 07

ಕೃಷಿ ಕಾಯ್ದೆ ಅರಿವಿಗೆ ರಾಜ್ಯ ಸರ್ಕಾರದ ಕಿರುಹೊತ್ತಿಗೆ

• ಎಚ್.ಕೆ. ನಟರಾಜ

ದಾವಣಗೆರೆ: ಕೇಂದ್ರ ಸರ್ಕಾರ ಜಾರಿಗೆ ತಂದ ಕೃಷಿ ಕಾಯ್ದೆ ತಿದ್ದುಪಡಿ ಬಗ್ಗೆ ಜನವಿರೋಧಿ ಆಲೆ ಎಬ್ಬಿಸಲು ದೇಶಾದ್ಯಂತ ರೈತ ಸಂಘಟನೆಗಳು, ವಿಪಕ್ಷಗಳು ಪ್ರತಿಭಟನೆ ಆರಂಭಿಸಿವೆ. ಆದರೆ ರಾಜ್ಯ ಸರ್ಕಾರ ವಿರೋಧದ ಮಧ್ಯೆ ಸದ್ದಿಲ್ಲದೆ ಹೊಸ ಕಾಯ್ದೆಗಳ ಬಗ್ಗೆ ಅನ್ನದಾತರಲ್ಲಿ ಅರಿವು ಮೂಡಿಸಲು ಮುಂದಾಗಿದೆ.

ಕೇಂದ್ರ ಸರ್ಕಾರ ಜಾರಿಗೆ ತಂದ ಮೂರು ಕೃಷಿ ಕಾಯ್ದೆಗಳ ಬೆಂಬಲಕ್ಕೆ ನಿಂತಿರುವ ರಾಜ್ಯ ಬಿಜೆಪಿ ಸರ್ಕಾರ, ಕೃಷಿ ಇಲಾಖೆ ಮೂಲಕ ಕಾಯ್ದೆಗಳಲ್ಲಿನ ಧನಾತ್ಮಕ ಅಂಶಗಳನ್ನು ಎಲ್ಲರಿಗೂ ಅರ್ಥವಾಗುವ ರೀತಿಯಲ್ಲಿ ಸರಳವಾಗಿ ಕನ್ನಡದಲ್ಲಿ ಮುದ್ರಿಸಿ ರೈತರ ಕೈಗೆ ಮುಟ್ಟಿಸುವ ಕೆಲಸ ಮಾಡುತ್ತಿದೆ. ಕೃಷಿ ಮಾರಾಟ ನೂತನ ಕಾನೂನುಗಳ ಒಂದು ಪಕ್ಷಿನೋಟ' ಎಂಬ ಹೆಸರಿನ ಈ ಕಿರು ಪುಸ್ತಕವನ್ನು ಪ್ರಕಟಿಸಲು ಬೆಂಗಳೂರು ಕೃಷಿ ವಿವಿ ಸಹಕಾರ ಪಡೆದುಕೊಂಡಿದೆ. ವಿವಿಯ ನಿವೃತ್ತ ಪ್ರಾಧ್ಯಾಪಕ ಪ್ರೊ. ಟಿ.ಎನ್. ವೆಂಕಟರೆಡ್ಡಿ ಪ್ರಾಧ್ಯಾಪಕ (ಕೃಷಿ ವಿಸ್ತರಣೆ) ಕೆ.ಎಚ್. ನಾಗರಾಜ್ ಅವರಿಂದ ಮಾಹಿತಿ ಸಂಗ್ರಹ ಹಾಗೂ ಸಂಪಾದನೆಯೊಂದಿಗೆ ಪುಸ್ತಕ ಸಿದ್ಧಪಡಿಸಲಾಗಿದೆ.

ಕೇಂದ್ರದ ಹೊಸ ಕೃಷಿ ಕಾಯ್ದೆಗಳು ರೈತ ಪರವಾಗಿವೆ. ಆದರೆ, ಹೋರಾಟ ಮಾಡುತ್ತಿರುವವರಿಗೆ ಈ ಕಾನೂನುಗಳ ಬಗ್ಗೆ ಮಾಹಿತಿ ಇಲ್ಲ. ಯಾರೂ ಕಾನೂನನ್ನು ಸರಿಯಾಗಿ ಓದಿಲ್ಲ. ಹೋರಾಟದಲ್ಲಿ ಪಾಲ್ಗೊಳ್ಳುವ ರೈತರಿಗಂತೂ ಮಾಹಿತಿಯೇ ಇಲ್ಲ. ಆದರೆ ದಾರಿ ತಪ್ಪಿಸುವ ಕೆಲಸವಾಗುತ್ತಿದೆ ಎಂದು ಬಾಯಿ ಮಾತಲ್ಲೇ ಹೇಳುತ್ತ ಬಂದಿರುವ ಸರ್ಕಾರ, ಈಗ ಪುಸ್ತಕದ ಮೂಲಕ ರೈತರಿಗೆ ಕಾನೂನು ತಿಳಿವಳಿಕೆ ನೀಡಲು ಮುಂದಾಗಿದೆ. ಈ ಜಾಗೃತಿ ಕಾರ್ಯಕ್ರಮದಿಂದ ಕಾನೂನು ವಿರೋಧಿಗಳು ನಡೆಸುವ ಪ್ರತಿಭಟನೆ, ಸಂವಾದಗಳಲ್ಲಿ ರೈತರ ಸಂಖ್ಯೆ ಕ್ಷೀಣಿಸುವ ಮೂಲಕವೇ ತಕ್ಕರ್ ನೀಡಲು ಸಜ್ಜಾಗಿದೆ.

ಸಂವಾದ-ಚರ್ಚೆಯೇ ನಡೆದಿಲ್ಲ!: ಹೊಸ ಕೃಷಿ ಕಾಯ್ದೆಗಳಿಂದ ರೈತರ ಆದಾಯ ದುಪ್ಪಟ್ಟು ಮಾಡಲು ಸಾಧ್ಯವಿಲ್ಲ, ಕಾರ್ಪೊರೇಟ್ ಕಂಪನಿಗಳಿಗೆ ಲಾಭವಾಗಿ ಸಣ್ಣರೈತರು ಹಾಗೂ ಚಿಲ್ಲರೆ ವ್ಯಾಪಾರಸ್ಥರು ಬೀದಿ ಪಾಲಾಗುತ್ತಾರೆ. ಎಪಿಎಂಸಿ ವ್ಯವಸ್ಥೆ ನಾಶವಾಗುತ್ತದೆ. ರೈತರಿಂದ ಕೃಷಿ ಭೂಮಿ ಕೈತಪ್ಪುವ ಆತಂಕವಿದೆ ಎಂದೆಲ್ಲ ಕಾಯ್ದೆವಿರೋಧಿ ಸಂಘಟನೆಗಳು ಹೇಳುತ್ತ ಹೊರಟಿದ್ದರೆ, ಇತ್ತ ಸರ್ಕಾರ ಇದರಿಂದ ರೈತರ ಆದಾಯ ದುಪ್ಪಟ್ಟು ಆಗಲಿದೆ. ಈ ಉದ್ದೇಶಕ್ಕಾಗಿಯೇ ಹೊಸ ಕಾಯ್ದೆ ತರಲಾಗಿದೆ. ಇಲ್ಲಿ ಎಲ್ಲರಿಗೂ ಉತ್ತಮ ದರ ಸಿಗಲಿದೆ. ಎಪಿಎಂಸಿ ವ್ಯವಸ್ಥೆಗೆ ಧಕ್ಕೆ ಆಗುವುದಿಲ್ಲ ಎಂದು ಹೇಳುತ್ತಿದೆ.

ಪುಸ್ತಕದಲ್ಲಿ ಏನಿದೆ?

ಹೊಸ ಕೃಷಿ ಕಾಯ್ದೆಗಳ ಬಗ್ಗೆ ಅನ್ನದಾತರಲ್ಲಿ ತಿಳಿವಳಿಕೆ ಮೂಡಿಸಲು ಕಿರು ಮಾಹಿತಿ ಪುಸ್ತಕದ ಮೊರೆ ಹೋಗಿರುವ ಸರ್ಕಾರ, ಕೇಂದ್ರ ಸರ್ಕಾರ 2020ರಲ್ಲಿ ಜಾರಿಗೆ ತಂದ ಹೊಸ ಕೃಷಿ ಕಾಯ್ದೆಗಳಾದ ರೈತರ ಉತ್ಪನ್ನ ವ್ಯಾಪಾರ ಮತ್ತು ವಾಣಿಜ್ಯ (ಉತ್ತೇಜನ ಮತ್ತು ಅಭಿವೃದ್ಧಿ) ಕಾಯಿದೆ-2020, ರೈತ (ಸಬಲೀಕರಣ ಮತ್ತು ಸಂರಕ್ಷಣೆ) ದರ ಭರವಸೆಯ ಒಪ್ಪಂದ ಮತ್ತು ಕೃಷಿ ಸೇವೆಗಳ ಕಾಯ್ದೆ-2020 ಹಾಗೂ ಆತ್ಯಾವಶ್ಯಕ ವಸ್ತುಗಳ ತಿದ್ದುಪಡಿ ಕಾಯ್ದೆ-2020 ಈ ಮೂರು ಕಾನೂನುಗಳ ಮುಖ್ಯಾಂಶಗಳು ಹಾಗೂ ಅನುಕೂಲಕರ ಅಂಶಗಳನ್ನು ಪ್ರತ್ಯೇಕವಾಗಿ ಪಟ್ಟಿ ಮಾಡಿ ಪ್ರಕಟಿಸಿದೆ.



ದಾವಣಗೆರೆ: ನೂತನ ಕಾಯ್ದೆಗಳ ಬಗ್ಗೆ ಕೃಷಿ ಇಲಾಖೆ ಪ್ರಕಟಿಸಿರುವ ಕಿರು ಹೊತ್ತಿಗೆ.

ಕೇಂದ್ರ ಸರ್ಕಾರ ಜಾರಿಗೆ ತಂದ ಮೂರು ಹೊಸ ಕೃಷಿ ಕಾಯ್ದೆಗಳ ಬಗ್ಗೆ ರೈತರಿಗೆ ತಿಳಿವಳಿಕೆ ನೀಡಲು ಕೃಷಿ ಇಲಾಖೆ, ಬೆಂಗಳೂರು ಕೃಷಿ ವಿವಿಯ ಸಂಪನ್ಮೂಲ ವ್ಯಕ್ತಿಗಳು ಸಂಗ್ರಹಿಸಿದ ಮಾಹಿತಿ ಆಧರಿಸಿ ಕಿರು ಮಾಹಿತಿ ಪುಸ್ತಕ ಮುದ್ರಿಸಿದೆ. ಈ ಪುಸ್ತಕವನ್ನು ಎಲ್ಲ ರೈತರಿಗೆ ತಲುಪಿಸುವ ಮೂಲಕ ಹೊಸ ಕಾಯ್ದೆಗಳ ರೈತರಿಗೆ ಅರಿವು ಮೂಡಿಸಲಾಗುತ್ತಿದೆ.

• **ಶ್ರೀನಿವಾಸ್ ಚಿಂತಾಲ್,** ಜಂಟಿ ನಿರ್ದೇಶಕರು, ಕೃಷಿ ಇಲಾಖೆ, ದಾವಣಗೆರೆ